Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ
(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 161] ಸೋಮವಾರ 17—5—48 [ಬಿಡಿಪ್ರ

ಯಹೂದಿ ಅರಬ್ ಬೀಕರ ಕದನ

ಗುಟ್ಟಿನ ಜಿಲ್ಲೆಗಳು

ಪಾಕಿಸ್ತಾನದ 5 ಜಿಲ್ಲೆಗಳಿಗೆ ಹಿಂದೂಸ್ತಾನದವರಾರನ್ನೂ ಹೋಗಗೊಡುವುದಿಲ್ಲ. ಆ ಜಿಲ್ಲೆಗಳಲ್ಲಿ ಜಮೀನ್ದಾರರ ವಶದಲ್ಲಿ ತುಂಬಾ ಹಿಂದೂ ಹೆಂಗಸರಿದ್ದಾರೆ; ಅವರನ್ನು ವಿಚಾರಿಸಿ ಹಿಂದೂಸ್ತಾನಕ್ಕೆ ಕಳುಹಿಸಿಕೊಳ್ಳಲು ಪಾಕೀಸ್ತಾನದ ಅಧಿಕಾರಿಗಳೇ ಸಂಕೋಚ ಪಡುತ್ತಾರಂತೆ. ಏಕೆಂದರೆ ಆ ಮುಸ್ಲಿಂ ಜಮೀನ್ದಾರರೇ ಪಾಕೀಸ್ತಾನದ ಜೀವಾಳ, ಒಬ್ಬ ಜಮೀನ್ದಾರನಲ್ಲಿದ್ದ ಹಿಂದೂ ಹುಡುಗಿಯೊಬ್ಬಳನ್ನು ಜಿಲ್ಲಾ ಕಲೆಕ್ಟರನೇ ಕಳುಹಿಸಲು ಸಂಕೋಚ ಪಟ್ಟು ಹೊರಡುತ್ತಿದ್ದ ಹುಡುಗಿಯನ್ನು ತಡೆದು ನಿಲ್ಲಿಸಿಬಿಟ್ಟ. ಇನ್ನೂ 10 ಸಾವಿರ ಮಂದಿ ಹೆಂಗಸರಾದರೂ ಅಲ್ಲಿರಬಹುದೆಂದು ಹೇಳುತ್ತಾರೆ (ಕೃ. ಸಂ)

ವುಡ್ ಲ್ಯಾಂಡ್ಸ್

ಜನನಿಬಿಡ 2 ನೇ ವಾರ
ಮಾಡರ್ನ್ ಥಿಯೇಟರ್ಸ್‌ರವರ —
ಮನಮೋಹನ ನೃತ್ಯ, ಮಧುರ ಸಂಗೀತ ರಮ್ಯ ಕಥೆಯ ಸುಂದರ ತಮಿಳು ಚಿತ್ರ.
೧೦೦೦ ತಲೈವಾಂಗಿ
ಅಪೂರ್ವ ಚಿಂತಾಮಣಿ
ಪಿ. ಎಸ್. ಗೋವಿಂದ್
ಎಸ್. ಸ್ವಾಮಿನಾಥ್
ಎಂ. ಎ, ಎಲ್. ಜಾನಕಿ,
ಮುಂತಾದವರು
ಪ್ರತಿದಿನ 3 ಆಟಗಳು

Released by Rajlakhmi Pictures
Gandhinagar, Bangalore City

At Opera
From 14—5—48
King of Mounties
A Republic serial
in 12 thrilling Parts
ಕಿಂಗ್ ಆಫ್ ಮೌಂಟೀಸ್
ಸೀರಿಯಲ್] ಪ್ರತಿದಿನ 3 ಆಟಗಳು
ಪ್ರಭಾದಲ್ಲಿ — ಹಂಏಕ್ ಹೈ

Edited, Printed and Published by M S Krishna Rao at the Satyavadi Press, Chamarai Agrahar, Mysore

ಪೌರಸಭೆ

ಮೈಸೂರು— ರಾಜಧಾನಿಯ ಪೌರಸಭೆಯ ಸಾಧಾರಣ ಜನರಲ್ ಮಿಾಟಿಂಗು ತಾ || 24 ರ ಸಂಜೆ 4 ಗಂಟೆಗೆ ನಡೆಯುವುದು

ಮೈಸೂರು ಡಿ || ಬೋರ್ಡ್

ಮೈ || ಡಿ || ಬೋರ್ಡಿನ ಸ್ಪೆಷಲ್ ಮಿಾಟಿಂಗು ಇದೇ ತಾ || 22 ರಲ್ಲಿ ಸರಗೂರಿನ ಟಿ. ಬಿ. ಯಲ್ಲಿ ನಡೆಯುವುದು.

'ಸಭಿಕ' ಎಂಬ ಪದದ ಪ್ರಯೋಗ

ಸಭೆಗಳಲ್ಲಿ ಮಾತನಾಡುವಾಗ ಕೆಲವರು ಸಮಾಜಿಕರನ್ನು ಉದ್ದೇಶಿಸಿ 'ಸಭಿಕರೇ' ಎಂದು ಕೆಲವು ಸಂದರ್ಭಗಳಲ್ಲಿ ಸಂಭೋಧಿಸುವುದುಂಟು. ಅನೇಕ ವಿದ್ಯಾವಂತರೂ ಈ ಪದವನ್ನು ಹೀಗೆಯೇ ತಪ್ಪಾಗಿ ಪ್ರಯೋಗಿಸುತ್ತಾರೆ. ಇದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಅಮರಕೋಶದಲ್ಲಿ ಸಭಿಕ ಎಂಬ ಪದಕ್ಕೆ 'ಸಭಿಕಾ ದ್ಯೂತಕಾರಕಾಃ' ಎಂದೆ 'ಜೂಜುಗಾರ.' ಎಂಬರ್ಥವಿದೆ. ಆದುದರಿಂದ ಸಾಮಾಜಿಕರನ್ನು 'ಸಭಿಕರೇ' ಎಂದು ಹೇಳುವುದಕ್ಕೆ ಬದಲಾಗಿ 'ಸಭ್ಯರೆ' ಎಂದು ಹೇಳುವುದು ಸೂಕ್ತವಲ್ಲವೇ! ಇಂತಹ ಪ್ರಮಾದಗಳು ನಡೆಯುದಂತೆ ಮೊದಲಿನಿಂದಲೂ ಎಚ್ಚರಿಕೆಯಿಂದ ಇರುವುದು ಭಾಷಾ ದೃಷ್ಟಿಯಿಂದ ಒಳ್ಳೆಯದಲ್ಲವೇ!

ವಿದ್ಯಾಂ[illegible]

ಯುದ್ಧ ಕಾಲವ ಕಾನೂನು

ಕೈರೋ ಮತ್ತು ಅಲೆಗ್ಜಾಂಡ್ರಿಯದಲ್ಲಿ ಯುದ್ಧ ಕಾಲವ ಕಾನೂನು ಜಾರಿಯಾಗಿದೆ: ವಿವಯನಥಾಳಿ ಮುಂಜಾಗ್ರತೆ ಬಗ್ಗೆ ಸ್ಪೆರ್ ಕಹೆಗಿಸುವ ವ್ಯವಸ್ಥೆ ಮಾಡಿದೆ

ರಜಕಾರರ ಹಾವಳಿ

ಗದಗು— ಚೀದರೆಯು ರಜಾಕನ ಮುಖ್ಯ ಕೇಂದ್ರವಾಗಿದೆ. ಸುತ್ತು ಮುತ್ತ ಸಾವಿರಗಟ್ಲೆ ಲೂಟಿಮಾಡಿ ಅನೇ ಮನೆಗಳು ಸುಡಲ್ಪಟ್ಟಿವೆ

ಮಾರ್ಷಲ್ ಲಾ

ಇರಾಕಿನಲ್ಲಿ ಮಾರ್ಷಲ್ ಲಾ ಜಾರಿಗೆ ತರಲಾಗಿದೆ.

ರಷ್ಯಾ ಎಚ್ಚರಿಸಿದೆ

ಅಥೆನ್ಸು — ಗ್ರೀಸಿನಲ್ಲಿ ಕಮ್ಯೂನಿಸ್ಟರಿಗೆ ಮರಣದಂಡನೆ ವಿಧಿಸಲಾಗದೆಂದು ರಷ್ಯಾ ಎಚ್ಚರಿಸಿದೆ

ಸಂಸ್ಕೃತವು ಮೃತ ಭಾಷೆಯಲ್ಲ

ತಿರುಪತಿಯಲ್ಲಿ ಓರಿಯಂಟಲ್ ಕಲಾ ಸಂಸ್ಥೆಯ ಅರವತ್ತಮೂರನೇ ವರ್ಧಂತಿ ದಿನ ಮದರಾಸು ಚೀಫ್ ಜಸ್ಟಿಸ್ ರಾಜಮನ್ನಾರ್‌ರು 'ಸಂಸ್ಕೃತವು ಮೃತ ಭಾಷೆಯಲ್ಲ : ಅದು ಹಿಂದೂಸ್ತಾನದ ಎಲ್ಲಾ ಭಾಷೆಗಳ ಜೀವ. ಜನರು ಇಂಗ್ಲೀಷಿಗೆ ಕಟ್ಟುಬಿದ್ದು ಸಂಸ್ಕೃತವನ್ನು ದೂರ ಮಾಡಿದರು; ಆದರೆ ಇನ್ನಾದರೂ [illegible]ೀವ ಗೊಳಿಸುವುದು, ಕರ್ತವ್ಯ

ಹೊಸಹೊಸ ಸುದ್ದಿಗಳು

ಲಂಡ್ನ್— ಈಜಿಪ್ಟು ಸೈನ್ಯವು ಟೆಲ್ ಅವಿಲ್ ಕಡೆಗೆ ನುಗ್ಗುತ್ತಿದೆ — ಇಸ್ರೇಲಿನ ಪುರಾತನ ನಗರ ಇವರ ವಶವಾಯಿತು — ಪೂರ್ವದಲ್ಲಿ ಅಬ್ದುಲ್ಲಾ ರಾಜರವರ ಟ್ರಾನ್ಸ್‌ಜೋರ್ಡನ್ ಸೇನೆಗಳು ಜೆರೀಜೆವನ್ನು ಪ್ರವೇಶಿಸಿತು; ಅಲ್ಲಿ ಸುಸ್ವಾಗತ ದೊರೆಯಿತು — ಟೆಲ್ ಅವೀಲಿನ ಮೇಲೆ ಬಾಂಬು ಬೀಳುತ್ತಿವೆ.

ಂ ಂ

ಜರ್ಮನಿಯಿಂದ ಜರೂಸೆಲಂಗೆ ಬರತಕ್ಕ ಯಹೂದರಿಗೆ ಅವಕಾಶಕೊಡಲಾಗಿದೆ ಎಂದು ಹೇಳಲಾಗಿದೆ

ಂ ಂ

ನವದೆಹಲಿ— ಹೈದರಾಬಾದು ಗಡಿ ಪ್ರದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಲು ಕಮ್ಯೂನಿಸ್ಟರು ಪ್ರಯತ್ನಿಸುತ್ತಲಿದ್ದಾರೆ

ಂ ಂ

ಹೈದರಾಬಾದು — ಗೌ || ಜ || ಮೌಂಟು ಬೇಟನ್ನರ ಖಾಸಾ ಪ್ರತಿನಿಧಿ ನೈಜಾಮರನ್ನು ಭೇಟಿ ಮಾಡಿ ಅವರು ತಂದಿದ್ದ ಕಾಗದ ಕೊಟ್ಟರು

ಂ ಂ

ಇಸ್ತಂಬಾಲ್ —ಅಮೇರಿಕಾದಿಂದ ಟರ್ಕಿಗೆ 18 ವಿಮಾನಗಳು ಬಂದವು

ಂ ಂ

ಮೈಸೂರು .... ಮೈಸೂರು ಜಿಲ್ಲಾ ಸಮ್ಮೇಳನವು ನೆನ್ನೆ ಮತ್ತು ಮೊನ್ನೆ ಯಶಸ್ವಿಯಾಗಿ ನಡೆಯಿತು:

ಂ ಂ

ಬೆಂಗಳೂರು— ಇದೇ ತಾ || 15 ರಿಂದ ತಾ || 19 ರವರೆಗೆ ಮೈಸೂರಿಗೆ ಆಹ್ವಾನಿಸಲ್ಪಟ್ಟಿರುವ ಅಖಿಲ ಭಾರತ ನೂಲು ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣದಾಸ್ ಗಾಂಧಿಯವರು ಸಂಸ್ಥಾನದಲ್ಲಿ ಪ್ರವಾಸಮಾಡಿ ಇಲ್ಲೀ ಖಾದಿ ಕೇಂದ್ರಗಳಿಗೆಲ್ಲಾ ಭೇಟಿ ಕೊಡುವರು

ಂ ಂ

ಹೈದರಾಬಾದ ಂ— ರಜಾಕರರ ಪೈಶಾಚ ಕೃತ್ಯ ಹೇಳತೀರದ್ದಾಗಿದೆ. ಏಳು ಜನರನ್ನು ಸಾಲಾಗಿ ನಿಲ್ಲಿಸಿ ಗುಂಡಿನಿಂದ ಹೊಡೆದು ಕೊಂದರು—ಒಂದು ಕಡೆ ಒಂದು ಮರಕ್ಕೆ ಒಬ್ಬನನ್ನು ನೇಣು ಹಾಕಿದರು—ಒಬ್ಬನ ಕಾಲನ್ನು ಮುರಿದರು

ಂ ಂ

ನವದೆಹಲಿ — ಈ ತಿಂಗಳು ಮೂರನೇ ವಾರದಲ್ಲಿ ಗಾಂಧೀಜಿ ಕೊಲೆಪಾತಕರ ವಿಚಾರಣೆ ಪ್ರಾರಂಭವಾಗುವುದೆಂದು ನಾಥೂರಾಂ ಗೊಡ್ಸೆ, ವಿ. ಡಿ. ಸವಾರ್ಕರ್, ಮತ್ತಿತರ 6 ಜನರು ಅಪರಾಧಿತರು

ತಾ॥ 17-5-48 ॥ಶ್ರೀ॥ ನಂ. 88

"ಪ್ರ ಬೋ ಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಶ್ರುತಿ-ಸ್ಮೃತಿಗಳ ವಿಸ್ತಾರ

(ಲೇ—ಕರಪಾತ್ರೀ ಸ್ವಾಮಿಗಳು)

——

(ಮುಂದುವರಿದುದು)

'ನಕಶ್ಚಿದ್ವೇದಕರ್ತಾ ಚ ವೇದಂ ಸ್ಮೃತ್ವಾ ಚತುರ್ಮುಖಃ ॥ ತಥೈವ ಧರ್ಮಾನ್ ಸ್ಮರತಿ ಮನುಃ ಕಲ್ಪಾಂತರೇಽಂತರೇ ॥' ಅಂದರೆ—ವೇದಕ್ಕೆ ಕರ್ತಾ ಯಾರೂ ಇಲ್ಲ: ಪ್ರತಿಯೊಂದು ಮಹಾಕಲ್ಪದ ಆದಿಯಲ್ಲಿಯೂ ವೇದವನ್ನು ಸ್ಮರಿಸಿ, ಅನೇಕ ಭಿನ್ನ ಸ್ಥಾನಗಳಲ್ಲಿ ಹೇಳುವ ಸಾಮಾನ್ಯ ಮತ್ತು ವಿಶೇಷ ಧರ್ಮಗಳನ್ನು ಸಂಗ್ರಹಿಸಿ, ಬ್ರಹ್ಮನು ಒಂದು ಸ್ಮೃತಿಯನ್ನು ಮಾಡುತ್ತಾನೆ. ಅದೇ ಸ್ಮೃತಿಯನ್ನನುಸರಿಸಿ ತಮ್ಮ ತಮ್ಮ ಮನ್ವಂತರದಲ್ಲಿ ಮನುವು 'ಮನು ಸ್ಮೃತಿ' ಯನ್ನು ರಚಿಸುತ್ತಾನೆ. ಮೇಲಿನ ವಿವರಣೆಯಿಂದ ಸ್ಪಷ್ಟವಾಗುವುದೇನೆಂದರೆ, ಹೇಗೆ ಒಂದು ಮಂದಿರದಲ್ಲಿ ಪರಸ್ಪರ ಸಮ್ಮಿಲಿತವಾದ ಸಾವಿರಾರು ಶಾಖೆಗಳಿರುತ್ತವೆಯೋ, ಯಾರೋ ಒಬ್ಬ ಚತುರ ಮನುಷ್ಯನು ಅದನ್ನು ಲೆಕ್ಕಮಾಡುತ್ತಾನೆಯೋ, ಹಾಗೆಯೇ ವಿಭಾಗ ಅಥವಾ ಗಣನೆಗಿಂತ ಮುಂಚೆ ಅನಂತವಾದ ಒಂದೇ ವೇದದಲ್ಲಿರುವ, ಆ ನೈಸರ್ಗಿಕ ಸಮ್ಮಿಲಿತ, ಅನಂತಶಾಖಾ ರೂಪ ಅವಯವಗಳನ್ನು ಜೀವಾತ್ಮರು ಲೆಕ್ಕಿಪ್ಪು ಮಾಡಲಾರರು. ಆ ಸಮಯ ವೇದವೇ ತನ್ನ ಅವಯವಗಳ ಗಣನೆ ಮಾಡುತ್ತದೆ. ಅಂದರೆ ಆ ಗಣನೆಯು ಅವಿಭಕ್ತ, ಪಿಂಡೀಭೂತವಾದ ಒಂದೇ ವೇದದ ಅವಯವಗಳದ್ದಾಗಿದೆ. 'ಯೋ ವೈ ವೇದಾಂಶ್ಚ ಪ್ರಹಿಣೋತಿತಸ್ಮೈತಿ' ಅಂದರೆ ಬ್ರಹ್ಮನಿಗಾಗಿ ಈಶ್ವರನು ವೇದಗಳನ್ನು ಪ್ರಕಟಿಸುತ್ತಾನೆ. ಇದರಲ್ಲಿ 'ವೇದಾ' ಎಂಬ ಬಹುವಚನದಿಂದಲೂ ಗೊತ್ತಾಗುವುದೇನೆಂದರೆ— ಸಮ್ಮಿಲಿತ ಋಗ್ವೇದಾದಿ ವೇದಗಳದ್ದೇ ಪ್ರಕಾಶನವು ಬ್ರಹ್ಮನ ಹೃದಯದಲ್ಲಾಯಿತು.

ಮುಕ್ತಿಕೋಪನಿಷತ್ತಿನಲ್ಲಿ ವರ್ಣಿತವಾದ ಗಣನೆಯು ವೇದಗಳ ಸಂಪೂರ್ಣ ಅವಯವಗಳದ್ದಲ್ಲ. ಯಾಕೆಂದರೆ 'ದಶ ದಶ ತಜ್ಜ್ಞಂ ದಶ ಶತಾನಿ ತತ್ಸಾಹಸ್ರಂ ತತ್ಸರ್ವಂ' 'ಅನಂತಾ ವೈ ವೇದಾಃ' ಅಂದರೆ ಶತ ಮತ್ತ ಸಹಸ್ರ ಮುಂತಾದ ಎಷ್ಟೆಷ್ಟು ಸಂಖ್ಯೆಗಳಿವೆಯೋ, ಅವೆಲ್ಲವೂ ವೇದದಲ್ಲಿದೆ; ವೇದಿಗಳು ಅನಂತ, ಇತ್ಯಾದಿ ಶೃತಿವಚನಗಳಿಂದ ವೇದಗಳಿಗೆ ಅನಂತ ಅವಯವವೆಂದು ಗೊತ್ತಾಗುತ್ತದೆ. ಸಂಖ್ಯೆಯು ಅನಂತವಾದಾಗ, ಅದರ ಲೆಕ್ಕು ಹೇಗಾದೀತು? ಆದುದರಿಂದ ಮುಕ್ತಿಕೋಪನಿಷತ್ತಿನಲ್ಲಿ ಹೇಳಿರುವ ಗಣನೆಯು ಒಂದೊಂದು ಜಾತಿಯದು. ಅಂದರೆ ವೇದದ ಅವಯವಗಳು ನಾಲ್ಕು ಜಾತಿಯದು. ಕೆಲವು ಋಗ್ವೇದ ಜಾತೀಯವಾಗಿಯೂ, ಕೆಲವು ಯಜುರ್ವೇದ ಜಾತೀಯವಾಗಿಯೂ ಕೆಲವು ಸಾಮವೇದ ಜಾತೀಯವಾಗಿಯೂ, ಕೆಲವು ಅಥರ್ವಣ ಜಾತೀಯವಾಗಿಯೂ ಇವೆ. ಹೇಗೆ ಜಗತ್ತಿನಲ್ಲಿ ಸ್ಥಾವರ ಜಾತೀಯ, ಜಂಗಮ ಜಾತೀಯ. ಹೀಗೆರಡು ಅವಯವವಿದ್ದರೂ ಅದರಲ್ಲಿ ಅನಂತತೆ ಇರುವುದೋ, ಹಾಗೆಯೇ ವೇದದಲ್ಲಿ ಋಗ್ವೇದ ಜಾತೀಯ ಆದಿ ನಾಲ್ಕೂ ಅವಯವಗಳಿದ್ದರೂ ಅವುಗಳಲ್ಲಿ ಅನಂತತೆ ಇರುತ್ತದೆ. ಆದ್ದರಿಂದ ಮುಕ್ತಿಕೋಪನಿಷತ್ತಿನ ಗಣನೆಗೂ 'ಅನಂತಾ ವೈ ವೇದಾಃ' ಎಂಬ ಶ್ರುತಿಗೂ ವಿರೋಧವಿಲ್ಲ. ಋಗ್ವೇದಾದಿಗಳಲ್ಲಿ ಜೀವಾತ್ಮಗಾತ್ರ್ಯವಾಗಿರುವ ಶಾಖೆಗಳ ವರ್ಣನೆಯು ಮುಕ್ತಿಕೋಪನಿಷತ್ತಿನಲ್ಲಿ ಬಂದಿದೆ: ಇನ್ನು ಪರಮೇಶ್ವರ ಮಾತ್ರ ಗಾತ್ರ್ಯವಾದ ಶಾಖೆಗಳ[illegible]ಲ್ಲಿ ಬರ[illegible]ವೇ[illegible]

ಸಂಪೂರ್ಣ ವೇದವನ್ನು ಓದಿ ಅರ್ಥ ತಿಳಿಯಲು ಕಷ್ಟವಾಗುತ್ತದೆಂದರಿತು, ಬ್ರಹ್ಮನು ಹಿಂದೆ ಹೇಳಿದ ಅನಂತ ವೇದದೆಂದಲೇ ಲಕ್ಷಾಧ್ಯಾಯೀ ಸ್ಮೃತಿಯನ್ನು ರಚಿಸಿದನು. ಇದಕ್ಕೇ ಪಿತಾಮಹ ಸ್ಮೃತಿ ಎಂದು ಹೆಸರು. ಅದರಿಂದ್ದೇ ಅಂಶದಿಂದ ಬೇರೆಬೇರೆ ಸ್ಮೃತಿಗಳಾದವು- ಈಗ ಲಕ್ಷಾಧ್ಯಾಯೀ ಇಲ್ಲ, ಆದರೆ ಪಿತಾಮಹ ಸ್ಮೃತಿಯು ಹೆಸರಿನಿಂದ ವೀರಮಿತ್ರೋದಯದಲ್ಲಿ 'ಶೂದ್ರ ರಾಜ್ಯೇಪಿ ನಿವಸೇತ್ ಯತ್ರ ಮಧ್ಯೇತು ಜಾಹ್ನವೀ' ಇತ್ಯಾದಿ ಐದು ಶ್ಲೋಕಗಳನ್ನು ಬರೆದಿದೆ. ಆದ್ದರಿಂದಲೇ 'ವಸಿಷ್ಠೋ ನಾಸದಶ್ಚೈವ ಸುಮಂತುಶ್ಚ ಪಿತಾಮಃ' ಎಂದು ಪಿತಾಮಹ ಬ್ರಹ್ಮನ ಹೆಸರು ಧರ್ಮಶಾಸ್ತ್ರಕಾರರೊಳಗೆ ಸೇರಿದೆ. ಅದೇ ಲಕ್ಷಾಧ್ಯಾಯೀ ಪಿತಾಮಹ ಸ್ಮೃತಿಯಿಂದ ಅರ್ಥಶಾಸ್ತ್ರ, ಕಾಮಶಾಸ್ತ್ರ, ಧರ್ಮಶಾಸ್ತ್ರ ಸ್ವತ್ವಾದಿಗಳಾದವು. ಅರ್ಥಶಾಸ್ತ್ರದ ಅಂಶದಿಂದಲೇ ಸುಂದವಿದ್ಯಾ ಗಜವಿದ್ಯಾ ಅಶ್ವವಿದ್ಯಾ ಆದಿ ಅನೇಕ ವಿದ್ಯೆಗಳಾದವು.

ಪ್ರ ಬೋ ಧ

ವಿಶೇಷಾಂಕವು

ಮುಂದಿನವಾರ ಪ್ರಕಟಿಸಲ್ಪಡುವುದು.

Save the Cow

ಗೋ ವಧೆ ನಿಲ್ಲಲಿ

ನಮ್ಮ ಇತಿಹಾಸ

ಒಂದು ಜಾತಿಯು ಇನ್ನೊಂದು ರಾಷ್ಟ್ರದ ಗೌರವವನ್ನೂ ಸ್ವಾಭಿಮಾನವನ್ನೂ ನಾಶ ಮಾಡುವುದಕ್ಕಾಗಿ, ಅದರ ಇತಿಹಾಸದಲ್ಲಿಯೂ ಸಂಸ್ಕೃತಿಯಲ್ಲಿಯೂ ಅಪನಂಬಿಕೆಯನ್ನು ಹುಟ್ಟಿಸಿಬಿಡುವುದು ವಿಜೇತೃವಿನ ಅತಿ ದೊಡ್ಡ ಜಯವಾಗಿದೆ. ಒಬ್ಬನು ಕಬ್ಬಿಣದ ಸಂಕೋಲೆಯಿಂದ ಬಿಗಿಯಲ್ಪಟ್ಟಿದ್ದರೂ ಯೋಚಿಸಲಿಕ್ಕೂ ಅರಿಯಲಿಕ್ಕೂ, ವಿಚಾರ ಮಾಡಲಿಕ್ಕೂ, ಉಪಾಸನಾದಿ ಪರಲೋಕಸಾಧನಾನುಷ್ಠಾನಕ್ಕೂ ಸ್ವತಂತ್ರನಾಗಿರಬಹುದು; ಆದರೆ ಯಾವನ ಮನೋಮಯ ಹಾಗೂ ವಿಜ್ಞಾನಮಯ ಶರೀರದ ಮೇಲೆ ಪರತಂತ್ರ್ಯದ ತಿಚ್ಚು ಬಿಗ್ದುಬಿಡುವುದೋ ಅತನು ಇಹಲೋಕ-ಪರಲೋಕಗಳಿಂದ ಭ್ರಷ್ಟನಾಗಿ ಏತಕ್ಕೂ ಬಾರದವನಾಗುತ್ತಾನೆ.

ವಿದೇಶಿಗಳು ಭಾರತದ ಸ್ಥೂಲದೇಹದ ಮೇಲೆ ಅಧಿಕಾರವನ್ನು ನೆಲೆಗೊಳಿಸಿಕೊಂಡ ಬಳಿಕ ಸೂಕ್ಷ್ಮಸ್ತರಗಳ ಮೇಲೂ ಅಧಿಕಾರವನ್ನು ಸ್ಥಿರಪಡಿಸಿಕೊಳ್ಳಲು ಪ್ರಯತ್ನಿಸಿ ಶ್ಚಯಿಸಿದರು. ಹಿತೈಷಿತನದ ಕಪಟದಿಂದ ಭಾರತವನ್ನು ಶಿಕ್ಷಿತಗೊಳಿಸಲಿಕ್ಕೂ ಸುಧಾರಿಸಲಿಕ್ಕೂ ತೊಡಗಿದರು. ನಿಮ್ಮಲ್ಲಿಯ ಇತಿಹಾಸವನ್ನೆಲ್ಲ [illegible]ಂದು ತಿಳಿಸುವ ಕೃಪೆದೋರಿದ[illegible]ಂಬ ಪ್ರಯತ್ನದಿಂದಲೂ [illegible]ದಲೂ ಭಾರತ ಮತ್ತ[illegible]ಪಾ ಹಿತ್ಯಗಳ ಹಾಗೂ [illegible]ಸ ವನ್ನು ನಿರ್ಮಿಸಲಾ[illegible]ಷ

ವಿ ಟೋ ಫೆ ರಿ ನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡ, ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಬಾಯಿಲೆ ಒಂದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

——

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

[illegible]ndustrial & Testing Laboratory Ltd.

Bangalore